# ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 7** **ಪ್ರಥಮ ಭಾಷೆ : ಕನ್ನಡ** **ಮಾಹೆ : ನವೆಂಬರ್–2021**

## ಗದ್ಯ ಭಾಗ : ಮೈಲಾರ ಮಹದೇವ

| ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| **ನವೆಂಬರ್**<br>**1 ನೇ ವಾರ** | *ಮಾತನಾಡುವುದು<br>• ಸಮಾರಂಭದ ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವುದು. | **ಚಟುವಟಿಕೆ – 1**<br>ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧೀ ಜಯಂತಿ ಇನ್ನೂ ಮುಂತಾದ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತೇವೆ. ಅಂತಹ ಸಮಾರಂಭಗಳಲ್ಲಿ ವಿದ್ಯಾರ್ಥಿಗಳೇ ಕಾರ್ಯಕ್ರಮಗಳನ್ನು ನಿರೂಪಣೆ ಮಾಡಲು ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡುವುದು. | ಅವಲೋಕನ |
| | | **ಚಟುವಟಿಕೆ – 2**<br>ವಿದ್ಯಾರ್ಥಿಗಳು ರಾಷ್ಟ್ರೀಯ ನಾಯಕರ ಬಗ್ಗೆ ಮಾತನಾಡಲು ಸಮಾರಂಭಗಳಲ್ಲಿ ಅವಕಾಶವನ್ನು ಕಲ್ಪಿಸುವುದು. | ಅವಲೋಕನ |
| | | **ಚಟುವಟಿಕೆ – 3**<br>ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಏರ್ಪಡಿಸಿ ವಿದ್ಯಾರ್ಥಿಗಳೇ ಅದನ್ನು ನಡೆಸಿಕೊಡಲು ಸೂಕ್ತ ನಿರ್ದೇಶನಗಳನ್ನು ನೀಡುವುದು. | ಅವಲೋಕನ |
| | • ಸ್ವಾತಂತ್ರ್ಯ ಹೋರಾಟಗಾರರಾದ ಮೈಲಾರ ಮಹದೇವ ರವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಯುವರು. | *ಶಿಕ್ಷಕರು ಸ್ಪಷ್ಟವಾಗಿ ಅರ್ಥಪೂರ್ಣವಾಗಿ ನಿರರ್ಗಳವಾಗಿ ಸೂಕ್ತ ಸ್ವರಭಾರದೊಂದಿಗೆ ಗದ್ಯ ಭಾಗವನ್ನು ಓದುವರು<br>* ಮಕ್ಕಳ ಅನುಕರಣ ಓದು, ವಿದ್ಯಾರ್ಥಿಗಳ ಮೌನ ಓದು<br>* ಮೈಲಾರ ಮಹದೇವ ರವರ ಸ್ವಾತಂತ್ರ್ಯ ಹೋರಾಟ ಅವರ ತ್ಯಾಗದ ಫಲ ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಅರ್ಥೈಸುವದು. | ಮೌಖಿಕ ಪ್ರಶ್ನೆಗಳು |

| | | | |
|---|---|---|---|
| ನವೆಂಬರ್ 2ನೇ ವಾರ | • ಹೊಸ ಪದಗಳ ಪರಿಚಯ<br><br>*ಏಕಪಾತ್ರಾಭಿನಯ<br><br>*ಸ್ವಂತ ವಾಕ್ಯ ರಚಿಸುವರು .<br><br>*ಅನ್ಯದೇಶ್ಯ ಪದಗಳನ್ನು ಗುರ್ತಿಸುವರು.<br><br>*ವಾಕ್ಯದಲ್ಲಿರುವ ವಿಶೇಷಣಗಳನ್ನು ಗುರ್ತಿಸುವರು. | *ವಿದ್ಯಾರ್ಥಿಗಳಿಗೆ ಹೊಸಪದಗಳನ್ನು ಪರಿಚಯ ಮಾಡಿಸುವುದು.<br>ಉದಾ : 1. ತುಕಡಿ = ಸೈನ್ಯ 2. ಕಾಳಗ = ಯುದ್ಧ<br><br>*ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ರಂತಹ ಮಹಾನ್ ದೇಶಭಕ್ತರ ಬಗ್ಗೆ ಏಕಪಾತ್ರಾಭಿನಯವನ್ನು ವಿದ್ಯಾರ್ಥಿಗಳಿಂದ ಮಾಡಿಸುವುದು.<br><br>*ಕೊಟ್ಟಿರುವ ಪದಗಳಿಗೆ ತಮ್ಮದೇ ಆದ ಸ್ವಂತ ವಾಕ್ಯ ರಚಿಸುವರು<br>ಉದಾ : ದೇಶಭಕ್ತ – ಭಗತ್‌ಸಿಂಗ್ ಮಹಾನ್ <u>ದೇಶಭಕ್ತ</u>ನಾಗಿದ್ದ<br><br>*ಹೊರಗಿನ ಭಾಷೆಗಳಿಂದ ಬಂದು ಒಂದು ಭಾಷೆಗೆ ಸೇರುವ ಶಬ್ದಗಳೇ ಅನ್ಯ ದೇಶ್ಯ ಶಬ್ಧಗಳೆಂಬುದನ್ನು ಅರ್ಥೈಸುವುದು.<br>ಉದಾ :<br>ಸಂಸ್ಕೃತದಿಂದ ಬಂದ ಪದಗಳು – ಧರ್ಮ, ಪುಣ್ಯ ಇತ್ಯಾದಿ<br>ಪೋರ್ಚುಗೀಸ್‌ನಿಂದ ಬಂದ ಪದಗಳು – ಸಾಬೂನು, ಮೇಜು ಇತ್ಯಾದಿ<br>ಇಂಗ್ಲೀಷಿನಿಂದ ಬಂದ ಪದಗಳು – ಕಾಲೇಜು, ನಂಬರು ಇತ್ಯಾದಿ<br><br>*ನಾಮಪದಗಳ ವಿಶೇಷವನ್ನು ಕುರಿತು ಹೇಳುವ ಪದಗಳೇ 'ವಿಶೇಷಣ'ಗಳು ಎಂಬುದನ್ನು ಉದಾಹರಣೆಗಳೊಂದಿಗೆ ಮನನ ಮಾಡಿಸುವುದು .<br>ಉದಾ : ಭಾರತೀಯ ವಿಜ್ಞಾನಿಗಳು <u>ಬುದ್ಧಿವಂತರು</u><br>*ಅಭ್ಯಾಸದ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಬರೆಯುವರು. | ಅಭ್ಯಾಸ ಹಾಳೆ<br><br>ಅವಲೋಕನ / ವೀಕ್ಷಣೆ<br><br>ಅಭ್ಯಾಸ ಹಾಳೆ<br><br>ಅಭ್ಯಾಸ ಹಾಳೆ<br><br>ಅವಲೋಕನ ಪಟ್ಟಿ<br><br>ಲಿಖಿತ ಪ್ರಶ್ನೆಗಳು |
| | | **ಪದ್ಯ : ವಚನಗಳ ಭಾವಸಂಗಮ** | |
| ನವೆಂಬರ್ 3ನೇ ವಾರ | * ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು . | **ಚಟುವಟಿಕೆ –1**<br>ವಚನಕಾರರ ವಚನಗಳನ್ನು ಸಂಗ್ರಹಿಸಿ ಬರೆದು ಅವುಗಳಲ್ಲಿ ಆಯ್ದ ಕೆಲವು ವಚನಗಳನ್ನು ಓದುವುದು ಮತ್ತು ಗುಂಪಿನಲ್ಲಿ ಅದರ ಭಾವಾರ್ಥವನ್ನು ಸಮಾಜದ ಪರಿಸ್ಥಿತಿಗಳಿಗೆ ಹೋಲಿಸಿ ತಾರ್ಕಿಕವಾಗಿ ತೀರ್ಮಾನಿಸಲು ಅವಕಾಶ ಮಾಡಿಕೊಡುವುದು. | ಅವಲೋಕನ<br><br>ಅವಲೋಕನ ಪಟ್ಟಿ |

| | | | |
|---|---|---|---|
| | **ವಚನಕಾರರ ಜೇಡರದಾಸಿಮಯ್ಯ, ಮಡಿವಾಳ ಮಾಚಯ್ಯ ಮುಕ್ತಾಯಕ್ಕ, ಸತ್ಯಕ್ಕ ಇವರ ಪರಿಚಯ ಮಾಡಿಕೊಡುವುದು.** | ಉದಾ: ಅಕ್ಕಮಹಾದೇವಿಯವರ ವಚನ<br>'ಬೆಟ್ಟದ ಮೇಲೊಂದು ಮನೆಯ ಮಾಡಿ'<br>**ಚಟುವಟಿಕೆ –2**<br>ಪೂರಕ ಪಾಠಗಳು/ಪದ್ಯಗಳನ್ನು ಆಯ್ದುಕೊಂಡು ಮಕ್ಕಳಿಗೆ ಓದಲು ತಿಳಿಸಿ ನಂತರ ಗುಂಪುಗಳಲ್ಲಿ ತಾವು ಓದಿದ ಪಠ್ಯದಲ್ಲಿನ ಪ್ರಮುಖ ಘಟನೆಗಳು. ಸನ್ನಿವೇಶಗಳ ಬಗ್ಗೆ ಆಲೋಚಿಸಿ ತಾರ್ಕಿಕ ತೀರ್ಮಾನಗಳನ್ನು ತೆಗೆದುಕೊಳ್ಳಲು ಮಾರ್ಗದರ್ಶನ ಕೊಡುವುದು.<br>ಉದಾ: ಬಸವಣ್ಣನವರಿಗೆ 'ಭಕ್ತಿ ಭಂಡಾರಿ' 'ಜಗಜ್ಯೋತಿ' – ಬಿರುದುಗಳು ಸಾರ್ಥಕವೆನಿಸಿದೆ. ಹೇಗೆ? ಎಂಬುದನ್ನು ಆಲೋಚಿಸಿ ತೀರ್ಮಾನಿಸಲು ತಿಳಿಸಲು ಹೇಳುವುದು.<br><br>ವಚನಕಾರರು ಹುಟ್ಟಿದ ಸ್ಥಳ, ಅಂಕಿತನಾಮ ವಚನಗಳ ಬಗ್ಗೆ ಶಿಕ್ಷಕರು ಮಕ್ಕಳಿಗೆ ತಿಳಿಸಿಕೊಡುವುದು | ಅವಲೋಕನ<br><br>ಅವಲೋಕನ ಪಟ್ಟಿ<br><br>ಅವಲೋಕನ<br><br>ಅಭ್ಯಾಸ ಹಾಳೆ |
| **ನವೆಂಬರ್ 2ನೇ ವಾರ** | • **ಹೊಸ ಪದಗಳ ಪರಿಚಯ**<br><br>***ಏಕಪಾತ್ರಾಭಿನಯ**<br><br>***ಸ್ವಂತ ವಾಕ್ಯ ರಚಿಸುವರು.**<br><br>***ಅನ್ಯದೇಶ್ಯ ಪದಗಳನ್ನು ಗುರ್ತಿಸುವರು.** | *ವಿದ್ಯಾರ್ಥಿಗಳಿಗೆ ಹೊಸಪದಗಳನ್ನು ಪರಿಚಯ ಮಾಡಿಸುವುದು.<br>ಉದಾ : 1. ತುಕಡಿ = ಸೈನ್ಯ 2. ಕಾಳಗ = ಯುದ್ಧ<br><br>*ಕಿತ್ತೂರು ರಾಣಿ ಚೆನ್ನಮ್ಮ, ಸಂಗೋಳ್ಳಿ ರಾಯಣ್ಣ ರಂತಹ ಮಹಾನ್ ದೇಶಭಕ್ತರ ಬಗ್ಗೆ ಏಕಪಾತ್ರಾಭಿನಯವನ್ನು ವಿದ್ಯಾರ್ಥಿಗಳಿಂದ ಮಾಡಿಸುವುದು.<br><br>*ಕೊಟ್ಟಿರುವ ಪದಗಳಿಗೆ ತಮ್ಮದೇ ಆದ ಸ್ವಂತ ವಾಕ್ಯ ರಚಿಸುವರು<br>ಉದಾ : ದೇಶಭಕ್ತ – ಭಗತ್ ಸಿಂಗ್ ಮಹಾನ್ ದೇಶಭಕ್ತನಾಗಿದ್ದ<br><br>*ಹೊರಗಿನ ಭಾಷೆಗಳಿಂದ ಬಂದು ಒಂದು ಭಾಷೆಗೆ ಸೇರುವ ಶಬ್ದಗಳೇ ಅನ್ಯ ದೇಶ್ಯ ಶಬ್ದಗಳೆಂಬುದನ್ನು ಅರ್ಥೈಸುವುದು. | ಅಭ್ಯಾಸ ಹಾಳೆ<br><br>ಅವಲೋಕನ / ವೀಕ್ಷಣೆ<br><br>ಅಭ್ಯಾಸ ಹಾಳೆ |

| | | | |
|---|---|---|---|
| | | ಉದಾ :<br>ಸಂಸ್ಕೃತದಿಂದ ಬಂದ ಪದಗಳು – ಧರ್ಮ, ಪುಣ್ಯ ಇತ್ಯಾದಿ<br>ಪೋರ್ಚುಗೀಸ್‌ನಿಂದ ಬಂದ ಪದಗಳು – ಸಾಬೂನು, ಮೇಜು ಇತ್ಯಾದಿ<br>ಇಂಗ್ಲೀಷಿನಿಂದ ಬಂದ ಪದಗಳು – ಕಾಲೇಜು, ನಂಬರು ಇತ್ಯಾದಿ | ಅಭ್ಯಾಸ ಹಾಳೆ |
| | ***ವಾಕ್ಯದಲ್ಲಿರುವ ವಿಶೇಷಣಗಳನ್ನು ಗುರ್ತಿಸುವರು.** | *ನಾಮಪದಗಳ ವಿಶೇಷವನ್ನು ಕುರಿತು ಹೇಳುವ ಪದಗಳೇ 'ವಿಶೇಷಣ'ಗಳು ಎಂಬುದನ್ನು ಉದಾಹರಣೆಗಳೊಂದಿಗೆ ಮನನ ಮಾಡಿಸುವುದು<br>ಉದಾ : ಭಾರತೀಯ ವಿಜ್ಞಾನಿಗಳು <u>ಬುದ್ಧಿವಂತರು.</u><br>*ಅಭ್ಯಾಸದ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಬರೆಯುವರು. | ಅವಲೋಕನ ಪಟ್ಟಿ<br><br>ಲಿಖಿತ ಪ್ರಶ್ನೆಗಳು |
| | *** ವಚನಗಳ ಭಾವ ಸಂಗಮ ಪಠ್ಯದಲ್ಲಿ ನೀಡಿರುವ ಜೇಡರ ದಾಸಿಮಯ್ಯ, ಮಡಿವಾಳ ಮಾಚಯ್ಯ, ಮುಕ್ತಾಯಕ್ಕ, ಸತ್ಯಕ್ಕ – ಇವರ ವಚನಗಳ ಮಾದರಿ ಓದು, ಮಕ್ಕಳ ಓದು – ಚಟುವಟಿಕೆ ಮಾಡಿಸುವರು.** | * ಶಿಕ್ಷಕರು ಮಕ್ಕಳಿಗೆ ಪ್ರಶ್ನೋತ್ತರಗಳ ಮೂಲಕ ಭಾವಾರ್ಥ ತಿಳಿಸುವರು.<br>1. ಹರನು ತನ್ನ ಭಕ್ತರನ್ನು ಯಾವಾಗ ಕರವಿಡಿದು ಎತ್ತಿಕೊಳ್ಳುವನು?<br>2. ಶಿವಾಚಾರದ ಪಥವನ್ನು ತೋರಿಸಲು ಏನು ಮಾಡಬೇಕು?<br>3. ನಡೆ–ನುಡಿಗಳ ಬಗ್ಗೆ ಮುಕ್ತಾಯಕ್ಕನ ಅಭಿಪ್ರಾಯವೇನು?<br>4. ಅಳಿಮನದಿಂದ ಉಂಟಾಗುವ ಪರಿಣಾಮವೇನು? | ಮೌಖಿಕ / ಲಿಖಿತ ಪ್ರಶ್ನೆಗಳು |
| | *** ಪದಗಳ ಅರ್ಥ ತಿಳಿಯುವುದು.** | * ತಿರಿ, ಮಿಸುನಿ, ಅರೆ, ಅರಿ, ಅಳಿಮನ, ಬಟ್ಟೆ – ಪದಗಳ ಅರ್ಥವನ್ನು ಬರೆಯುವುದು. | ಅಭ್ಯಾಸ ಹಾಳೆ |
| | *** ಅಭ್ಯಾಸ ಚಟುವಟಿಕೆಗಳು** | * ಪುಟ ಸಂಖ್ಯೆ 106 ಮತ್ತು 107 ರಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು. | ಅಭ್ಯಾಸ ಹಾಳೆ |
| | | **ಪೂರಕ ಪದ್ಯ : ಈ ಭೂಮಿ ಬಣ್ಣದ ಬುಗುರಿ** | |
| **ನವೆಂಬರ್ 4 ನೇ ವಾರ** | **ಕ್ಷೇತ್ರ : ಓದುವುದು** | ಕೃತಿಕಾರರ ಪರಿಚಯ :<br>ಹೆಸರು : ಹಂಸಲೇಖ<br>ಜನನ : 1951<br>ಮೂಲ ಹೆಸರು : ಜಿ. ಗಂಗರಾಜ | ಅವಲೋಕನ |

| | | | |
|---|---|---|---|
| | **ಸಾಮರ್ಥ್ಯ** : ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು.<br><br>* ಹೊಸ ಪದಗಳ ಅರ್ಥವನ್ನು ಅರಿಯುವರು.<br><br>* ಸಮನಾರ್ಥಕ ಪದಗಳನ್ನು ತಿಳಿಯುವರು. | ಸಾಧನೆ : ಹಿಂದೂಸ್ಥಾನಿ & ಪಾಶ್ಚಾತ್ಯ ಸಂಗೀತ ಶೈಲಿ ಕಲಿಕೆ<br>'ಹುಟ್ಟಿದರೇ ಕನ್ನಡ ನಾಡಲ್ಲಿ ಹುಟ್ಟಬೇಕು' ಜನಪ್ರಿಯ ಗೀತೆಯ ರಚನೆ<br>500 ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.<br><br>* ಆಡಿಯೋ ಮೂಲಕ 'ಈ ಭೂಮಿ ಬಣ್ಣದ ಬುಗರಿ' ಹಾಡನ್ನು ಕೇಳಿಸುವುದು.<br>* ಶಿಕ್ಷಕರ ಮಾದರಿ ವಾಚನ<br>* ವಿದ್ಯಾರ್ಥಿಗಳಿಂದ ಪದ್ಯ ವಾಚನ<br><br>* ಹೊಸ ಪದಗಳ ಅರ್ಥ<br>1. ಕ್ಷಣಿಕ = ಶಾಶ್ವತವಲ್ಲದ 2. ನಗರಿ = ನಗರ 3. ಭರವಸೆ= ನಂಬಿಕೆ<br>4. ಕಾಲ = ಸಮಯ 5. ಹಡೆದವರು = ಹೆತ್ತವರು<br><br>* ಭೂಮಿ = ಇಳೆ, ಪೃಥ್ವಿ, ಧರೆ, ವಸುಂಧರೆ<br>* ತಾಯಿ = ಜನನಿ, ಅಮ್ಮ, ಮಾತೃ, ಮಾತೆ | ಸುಮೇರು ಭಾಗ 2 ರ ಪುಟ ಸಂಖ್ಯೆ 60 ನ್ನು ಹೆಚ್ಚಿನ ಅಭ್ಯಾಸಕ್ಕಾಗಿ ಬಳಸುವುದು |
| | **ಪದ್ಯದ ಭಾವಾರ್ಥವನ್ನು ಗ್ರಹಿಸುವರು.** | ಶಿಕ್ಷಕರು ಪದ್ಯದ ಭಾವಾರ್ಥವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವರು.<br>ಪುಟ ಸಂಖ್ಯೆ 143 ರ ಅಭ್ಯಾಸ ಚಟುವಟಿಕೆ ಮಾಡಿಸುವುದು.<br>Youtube link<br>https://youtu.be/RrEmc-eUxhA | ಅವಲೋಕನ |

**ಸೂಚನೆ:**

1. ಮೇಲೆ ನೀಡಿರುವ ಕಲಿಕಾ ಚಟುವಟಿಕೆಗಳು ಕೇವಲ ಸಲಹಾತ್ಮಕವಾಗಿದ್ದು ಶಿಕ್ಷಕರು ಇವುಗಳಿಗಿಂತಲೂ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಲು ಸ್ವತಂತ್ರರು
2. ಸುಮೇರು ಕಲಿಕಾ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳಬಹುದು
3. ಸಂವೇದ ಪಾಠದ ಚಟುವಟಿಕೆಗಳನ್ನು ಶಿಕ್ಷಕರು ಬಳಸಿಕೊಳ್ಳುವುದು.

**ಅಭ್ಯಾಸ ಹಾಳೆ – 1**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಗದ್ಯ : ಮೈಲಾರ ಮಹಾದೇವ**

---

☞ **ಈ ಪದಗಳಿಗೆ ಅರ್ಥ ಬರೆಯಿರಿ:**

1. ಧಕ್ಕೆ = ________________ 2. ಮಡು = ____________________

3. ತುಕಡಿ = ________________ 4. ಕಾಳಗ = ____________________

☞ **ಕೆಳಗೆ ಸೂಚಿಸಿರುವ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ:**

1. ಆಡಳಿತ = ____________________________________________________

2. ಚಳುವಳಿ = ___________________________________________________

☞ **ಈ ಕೆಳಕಂಡ ಅನ್ಯದೇಶ್ಯ ಪದಗಳಿಗೆ ಉದಾಹರಣೆ ಕೊಡಿ:**

1. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಪದಗಳಿಗೆ ಎರಡು ಉದಾಹರಣೆ ನೀಡಿ

   ______________________________________________________________

2. ಇಂಗ್ಲೀಷ್‌ನಿಂದ ಕನ್ನಡಕ್ಕೆ ಬಂದ ಪದಗಳಿಗೆ ಎರಡು ಉದಾಹರಣೆ ನೀಡಿ.

   ______________________________________________________________

☞ **ಈ ವಾಕ್ಯಗಳಲ್ಲಿರುವ ವಿಶೇಷಣಗಳನ್ನು ಗುರ್ತಿಸಿ:**

1. ಮಿನುಗುವ ನಕ್ಷತ್ರವನ್ನು ನೋಡುತ್ತಾ ಇರಲು ನನಗೆ ಇಷ್ಟ. ____________________

2. ಸುಸ್ತಾದ ಯಾತ್ರಿಕರು ತಂಗಲು ತಂಗುದಾಣಗಳಿರಬೇಕು. ____________________

**ಅಭ್ಯಾಸ ಹಾಳೆ – 2**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಗದ್ಯ : ಮೈಲಾರ ಮಹಾದೇವ**

---

☞ **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಮೋಟೆ ಬೆನ್ನೂರು ಎಂಬ ಹಳ್ಳಿ ಯಾವ ಜಿಲ್ಲೆಯಲ್ಲಿದೆ?

   ______________________________________________

2. ಮೈಲಾರ ಮಹದೇವರವರ ತಂದೆ–ತಾಯಿ ಹೆಸರೇನು?

   ______________________________________________

3. 1942 ರಲ್ಲಿ ಗಾಂಧೀಜಿಯವರು ಯಾವ ಘೋಷಣೆ ಮಾಡಿದರು?

   ______________________________________________

4. ಮಹಾದೇವರವರು ಎಲ್ಲಿ ಪೋಲೀಸರ ಬಂದೂಕು ಅಪಹರಿಸಿದರು?

   ______________________________________________

☞ **ಖಾಲಿ ಜಾಗವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ:**

1. ಪ್ರಾಥಮಿಕ ನಂತರದ ವಿದ್ಯಾಭ್ಯಾಸಕ್ಕಾಗಿ ಮಹಾದೇವ ______________ ಶಾಲೆಗೆ ಹೋದರು.
2. ಮಹಾದೇವ ______________ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದರು.
3. ________________ ಬಾಳು ಮೀಸಲಾಗಿಸಬೇಕು.

**ಅಭ್ಯಾಸ ಹಾಳೆ – 3**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಗದ್ಯ : ಮೈಲಾರ ಮಹಾದೇವ**

---

☞ **ಈ ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರಿಸಿ:**

1. ದಂಡಿಯಾತ್ರೆಯಲ್ಲಿ ಹೆಜ್ಜೆ ಹಾಕಿದ ಮಹಾದೇವರಿಗೆ ಆದ ಶಿಕ್ಷೆ ಏನು?

______________________________________________

______________________________________________

2. ಮಹಾದೇವ ರಕ್ತದ ಮಡುವಿನಲ್ಲಿ ಬಿದ್ದದ್ದು ಏಕೆ?

______________________________________________

______________________________________________

☞ **ಈ ಕೆಳಗಿನ ಪ್ರಶ್ನೆಗೆ ಐದು – ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ಹೊಸರಿತ್ತಿಯಲ್ಲಿ ನಡೆದ ಘಟನೆಗಳು ಯಾವುವು?

______________________________________________

______________________________________________

______________________________________________

**ಅಭ್ಯಾಸ ಹಾಳೆ – 4**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಗದ್ಯ : ಮೈಲಾರ ಮಹಾದೇವ**

---

☞ **ಈ ಅಕ್ಷರ ಬಂಧದಲ್ಲಿ ಅಡಗಿರುವ ವ್ಯಕ್ತಿಗಳ ಹೆಸರುಗಳು ಮತ್ತು ಸ್ಥಳಗಳ ಹೆಸರುಗಳನ್ನು ಪತ್ತೆ ಮಾಡಿ ಬರೆಯಿರಿ:**

| | | | | | | |
|---|---|---|---|---|---|---|
| ಕ | ಲಾ | ದ | ಗಿ | ರ | ಮೋ | ಮಾ |
| ಮ | ವ | ಗಾಂ | ಧೀ | ಜಿ | ಟೆ | ರ್ತಂ |
| ಸ | ಬ | ರ | ಮ | ಘ | ಬೆ | ಡ |
| ಪ | ಹಾ | ವೇ | ಎ | ಬ | ನ್ನೂ | ಪ್ಪ |
| ಹಂ | ಸ | ಭಾ | ವಿ | ಸ | ರು | ದ |
| ಗ | ಸಿ | ದ್ದ | ಮ್ಮ | ಮ್ಮ | ಕ | ಜ |
| ಮೈ | ಲಾ | ರ | ಮ | ಹಾ | ದೇ | ವ |

| **ವ್ಯಕ್ತಿಗಳ ಹೆಸರು** | **ಸ್ಥಳಗಳ ಹೆಸರು** |
|---|---|
| | |
| | |
| | |
| | |
| | |

**ಅಭ್ಯಾಸ ಹಾಳೆ – 5**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಗದ್ಯ : ಮೈಲಾರ ಮಹಾದೇವ**

---

☞ **ಈ ಕೆಳಗಿನ ಪದಗಳನ್ನು ಸಂಸ್ಕೃತ, ಪೋರ್ಚುಗೀಸ್, ಇಂಗ್ಲೀಷ್ ನಿಂದ ಬಂದ ಪದಗಳಾಗಿ ವಿಂಗಡಿಸಿ ಬರೆಯಿರಿ:**

**ಭೂಮಿ, ಪಾದ್ರಿ, ಸಂಜೆ**

**ಲಾಯರು, ಸಾಬೂನು, ರಾಜ**

**ಶಕ್ತಿ, ನದಿ, ಎಕರೆ, ಪ್ಲೇಗು**

**ಇಸ್ತ್ರೀ, ರಾತ್ರಿ, ಅಲಮಾರು**

**ಫೀಜು, ಕಾಲೇಜು, ಕಥೆ**

| ಸಂಸ್ಕೃತ | ಪೋರ್ಚುಗೀಸ್ | ಇಂಗ್ಲೀಷ್ |
|---|---|---|
| | | |
| | | |
| | | |
| | | |
| | | |

**ಅಭ್ಯಾಸ ಹಾಳೆ – 1**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಪದ್ಯ : ವಚನಗಳ ಭಾವ ಸಂಗಮ**

---

☞ **ಕೆಳಗಿನ ವಚನವನ್ನು ಓದಿ, ಆಲೋಚಿಸಿ ತಾರ್ಕಿಕವಾಗಿ ಭಾವಾರ್ಥ ಬರೆಯಿರಿ:**

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದೊಡೆಂತಯ್ಯ?

ಸಮುದ್ರದ ತಡಿಯಲೊಂದು ಮನೆಯ ಮಾಡಿ

ನೊರೆ ತೊರೆಗಳಿಗಂಜಿದೊಡೆಂತಯ್ಯ?

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ

ನಾಚಿದೊಡೆಂತಯ್ಯ?

ಚನ್ನಮಲ್ಲಿಕಾರ್ಜುನದೇವ ಕೇಳಯ್ಯ ಈ

ಲೋಕದೊಳಗೆ ಹುಟ್ಟಿದ ಬಳಿಕ

ಸ್ತುತಿ–ನಿಂದೆಗಳು ಬಂದರೆ ಮನದಲ್ಲಿ ಕೋಪವ

ತಾಳದೆ ಸಮಾಧಾನಿಯಾಗಿರಬೇಕು

**– ಅಕ್ಕಮಹಾದೇವಿ**

☞ **ಗುಂಪು ಚಟುವಟಿಕೆ:**

ಬಸವಣ್ಣನವರಿಗೆ 'ಭಕ್ತಿ ಭಂಡಾರಿ', 'ಜಗಜ್ಯೋತಿ' ಎಂಬ ಬಿರುದುಗಳು ಸಾರ್ಥಕವೆನಿಸಿವೆ. ಹೇಗೆ? ಚರ್ಚಿಸಿ ತೀರ್ಮಾನ ತಿಳಿಸಿ.

☞ **ಪದಗಳ ಅರ್ಥ ತಿಳಿಸಿ.**

1. ತಿರಿ 2. ಮಿಸುನಿ 3. ಅರಿ 4. ಏಡಿಸಲು 5. ಬಟ್ಟೆ 6. ಅಳಿಮನ

**ಅಭ್ಯಾಸ ಹಾಳೆ – 2**

**ಪ್ರಥಮ ಭಾಷೆ – ಕನ್ನಡ**

**ತರಗತಿ : 7** **ಪದ್ಯ : ವಚನಗಳ ಭಾವ ಸಂಗಮ**

☞ **ಮೊದಲೆರೆಡು ಪದಗಳಿಗಿರುವ ಪದದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:**

1. ಅರೆದು ನೋಡುವ : ಚಂದನದಂತೆ : : ಅರಿದು ನೋಡುವ : ________________
2. ಬಟ್ಟೆ : ಮಾರ್ಗ : : ಮಿಸುನಿ : ________________
3. ಮುಕ್ತಾಯಕ್ಕ : ಅಜಗಣ್ಣ ತಂದೆ : : ಸತ್ಯಕ್ಕ : ________________

☞ **ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಹರನು ತನ್ನ ಭಕ್ತರನ್ನು ಹೇಗೆ ಪರೀಕ್ಷಿಸುತ್ತಾನೆ?
2. ಮಹಾಜ್ಞಾನದಾಚರಣೆ ಯಾವುದು?
3. ಯಾವುದಕ್ಕೆ ಆಸೆ ಮಾಡಿದರೆ ನರಕದಲ್ಲಿ ಅದ್ದಬೇಕು?

☞ **ಕೊಟ್ಟಿರುವ ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ:**

1. ಶಿವನು ಯಾವಾಗ ತನ್ನ ಭಕ್ತರನ್ನು ಕರವಿಡಿದು ಎತ್ತಿಕೊಳ್ಳುತ್ತಾನೆ?
2. ಆಸೆ–ಆಮಿಷಗಳಿಂದ ಮುಕ್ತರಾಗುವ ಬಗೆಯನ್ನು ಸತ್ಯಕ್ಕ ತನ್ನ ವಚನದಲ್ಲಿ ಹೇಗೆ ವ್ಯಕ್ತಗೊಳಿಸಿದ್ದಾಳೆ?

☞ **ವಿವಿಧ ವಚನಕಾರರ ಚಿತ್ರಗಳನ್ನು ಸಂಗ್ರಹಿಸಿ ಅವರ ಒಂದೊಂದು ಪ್ರಸಿದ್ಧ ವಚನಗಳನ್ನು ಬರೆದು ಯೋಜನೆಯನ್ನು ತಯಾರಿಸಿ.**

## ಅಭ್ಯಾಸ ಹಾಳೆ – 1

## ಪ್ರಥಮ ಭಾಷೆ – ಕನ್ನಡ

**ತರಗತಿ : 7** **ಪದ್ಯ : ಈ ಭೂಮಿ ಬಣ್ಣದ ಬುಗರಿ**

---

☞ **ಪದಗಳ ಅರ್ಥ ಬರೆಯಿರಿ:**

1. ಕ್ಷಣಿಕ =
2. ನಗರಿ =
3. ಭರವಸೆ =
4. ಕಾಲ =
5. ಹಡೆದವರು

☞ **ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಬಣ್ಣದ ಬುಗರಿ ಯಾವುದು?

   ______________________________________________

2. ಯಾರ ಋಣವನ್ನು ಮರೆಯಬಾರದು?

   ______________________________________________

3. ಯಾವುದು ಕ್ಷಣಿಕವಾದುದು?

   ______________________________________________

4. ಎಂತಹ ನಗುವನ್ನು ಮರೆಯಬಾರದು?

   ______________________________________________

☞ **ಸಮನಾರ್ಥಕ ಪದ ಬರೆಯಿರಿ:**

1. ಭೂಮಿ = __________ ______________ ______________
2. ತಾಯಿ = __________ ______________ ______________

☞ **ಕೊಟ್ಟಿರುವ ಪದ್ಯಭಾಗದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಮರಿಬೇಡ ತಾಯಿಯ ಋಣವ
ಮರಿಬೇಡ ತಂದೆಯ ಒಲವ
ಹಡೆದವರೇ ದೈವ ಕಣೋ
ಈ ಭೂಮಿ ಬಣ್ಣದ ಬುಗರಿ ಆ ಶಿವನೇ ಚಾಟಿ ಕಣೋ